# ತೂಗು ಸೇತುವೆಯಲ್ಲಿ ತೂರಾಡುವ ಬದುಕು



ಸ್ವಾತಂತ್ರ್ಯ ದೊರೆತು ಏಳು ದಶಕಗಳು ಸಮೀಪಿಸುತ್ತಿದ್ದರೂ ಅಭಿವೃದ್ಧಿಯಲ್ಲಿ ನಾವೆಷ್ಟು ಹಿಂದೆ ಎನ್ನುವುದಕ್ಕೆ ಸಾಕ್ಷಿ ಉತ್ತರ ಕನ್ನಡ ಜಿಲ್ಲೆಯ ಸಿದ್ದಾಪುರ ತಾಲೂಕಿನ ಬಾಳೂರ ತೂಗು ಸೇತುವೆ. ಬಾಳೂರು, ಹೊಸಗದ್ದೆ, ಹಂಚಳ್ಳಿ, ಕೆಂದಿಗೆತೋಟ, ಬಣಗೆ ಮುಂತಾದ ಊರುಗಳಿಂದ ಸಂಪರ್ಕ ಕಲ್ಪಿಸುವ ನೂರಾರು ಮೀಟರ್‌ಗಳಷ್ಟು ಉದ್ದದ ಈ ತೂಗು ಸೇತುವೆಯ ನಿರ್ಮಾಣದಲ್ಲಿ ಗ್ರಾಮ ಪಂಚಾಯ್ತಿಯ ಅನುದಾನ ಅತ್ಯಲ್ಪ. ಊರವರ ಶ್ರಮವೇ ಅಧಿಕ. ಬಲವಾದ ಕಬ್ಬಿಣದ ಹಗ್ಗದ ಆಧಾರದ ಮೇಲೆ ಈ ತೂಗು ಸೇತುವೆ ನಿರ್ಮಾಣವಾಗಿದ್ದು ನಡೆದಾಡುವ ಕಡೆ ಮಾತ್ರ ಬಿದಿರಿನ ಹಾಗೂ ಅಡಕೆಯ ದಬ್ಬೆ ಬಳಸಲಾಗಿದೆ.

ಇದೀಗ ಸೇತುವೆಯ ಕಬ್ಬಿಣದ ಹಗ್ಗಕ್ಕೆ ತುಕ್ಕು ಬರುತ್ತಿದ್ದರೆ, ಅಡಿಕೆ ದಬ್ಬೆಗಳೂ ಶಿಥಿಲವಾಗುತ್ತಿವೆ. ಸೇತುವೆಯಲ್ಲಿ ಓಡಾಡುವಾಗ ತೊಟ್ಟಿಲು ತೂಗಿದಂತೆ ತೂಗು ಸೇತುವೆಯೂ ಓಲಾಡುತ್ತದೆ. ಈ ಸೇತುವೆಯಲ್ಲಿ ಸಂಚರಿಸುವವರು ಅಂಗೈಲಿ ಜೀವ ಹಿಡಿದು ಓಡಾಡುವುದು ಅನಿವಾರ್ಯವಾದರೆ ಮಕ್ಕಳನ್ನು ತೂಗುಸೇತುವೆ ಮೂಲಕ ಶಾಲೆಗೆ ಕಳಿಸುವ ಪಾಲಕರೂ ಅವರು ಸುರಕ್ಷಿತವಾಗಿ ಮನೆಗೆ ತಲುಪುವವರೆಗೆ ಆತಂಕಪಡುತ್ತಾರೆ. ಸುರಕ್ಷಿತ ತೂಗು ಸೇತುವೆ ಇಲ್ಲವೇ ಭದ್ರವಾದ ಕಾಂಕ್ರೀಟ್ ಸೇತುವೆ ಈ ಭಾಗದವರಿಗೆ ಮರೀಚಿಕೆಯೋ ಏನೋ?

ಚಿತ್ರ ಬರಹ:

**ಕೆಕ್ಕಾರ ನಾಗರಾಜ ಭಟ್, ಸಿದ್ದಾಪುರ**



# ನೀರ್ಗುಳ್ಳೆಗಳ ಕೊಳ

ನಿಟ್ಟೂರಿನಿಂದ ಕೊಡಚಾದ್ರಿಗೆ ಕ್ರಮಿಸುವ ದಟ್ಟ ಕಾನನದ ಅಂಕುಡೊಂಕಿನ ಹಾದಿಯಲ್ಲಿ ಸಿಗುವ ಗೌರೀತೀರ್ಥವು ರಾಜ್ಯದಲ್ಲಿಯೇ ಅತಿ ವಿಶಿಷ್ಟವೆನಿಸಿರುವ ನೀರ್ಗುಳ್ಳೆಗಳ ಕೊಳ. ಸುಮಾರು 1200 ವರ್ಷಗಳ ಹಿಂದೆ ಇಲ್ಲಿ ತಪಸ್ಸನ್ನು ಆಚರಿಸಿದ ಶ್ರೀ ಚಂಪಕ ಮಹರ್ಷಿಗಳು ತಮ್ಮ ಚಪ್ಪಾಳೆಯಿಂದ ಸೃಷ್ಟಿಸಿದರು ಎಂಬ ಐತಿಹ್ಯವುಳ್ಳ ಈ ಕೊಳದಲ್ಲಿ ಸದಾಕಾಲ, ನೀರಿನ ಗುಳ್ಳೆಗಳು ಮೇಲೇರಿ ಬರುತ್ತಲೇ ಇರುತ್ತವೆ. ವರದಹಳ್ಳಿಯ ಯೋಗೀಶ್ವರರಾದ ಶ್ರೀ ಶ್ರೀಧರ ಮಹಾಸ್ವಾಮಿಗಳು ಈ ಕೊಳದ ನೀರಿನ ತೆರೆಯ ಮೇಲೆ ಕುಡಿಬಾಳೆಯಲ್ಲಿ ಕುಳಿತು ಅನುಷ್ಠಾನಗೈದಿಹರು ಎನ್ನಲಾದ ಈ ಕೊಳದ ನೀರು ದಡದ ಮೇಲಿನ ದೇಗುಲದ ಶ್ರೀ ಶಂಭುಲಿಂಗೇಶ್ವರನ ಅಭಿಷೇಕಕ್ಕೆ ಮೀಸಲು.

**- ಅಮರಜಾ ಹೆಗಡೆ, ಮೈಸೂರು**

# ಸಿಮೆಂಟ್‌ನಲ್ಲಿ ಅರಳಿದ ಅಶೋಕವನ

ಮಹಾಕಾವ್ಯಗಳಲ್ಲಿ ಒಂದಾದ ರಾಮಾಯಣದಲ್ಲಿ ಬರುವ ಸೀತಾಪಹರಣದ ಕತೆಯು ಗೊತ್ತಿರುವ ವಿಷಯ. ಈ ಘಟನೆಯನ್ನು ಸಿಮೆಂಟ್‌ನಲ್ಲಿ ಅರಳಿಸಲಾಗಿದೆ. ಇದು ಇರುವುದು ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರ ತಾಲ್ಲೂಕಿನ ಇಡಗುಂಜಿ ಕ್ರಾಸ್ ಬಳಿ. ಹೊನ್ನಾವರ ಅರಣ್ಯ ಇಲಾಖೆಯವರು ನಿರ್ಮಿಸಿರುವ ಈ ಅಶೋಕವನದಲ್ಲಿ ಸೀತೆ ಮತ್ತು ಆಂಜನೇಯ ಸಂಭಾಷಣೆ ನಡೆಸುತ್ತಿರುವ ದೃಶ್ಯ ಕೆತ್ತಲಾಗಿದೆ.

**- ಬಳಕೂರು ವಿ.ಎಸ್.ನಾಯಕ್, ಬೆಂಗಳೂರು**

